ನೇಗಿಲು ಹಿಡಿಯುತ್ತಿದ್ದ.

ಕೃಷ್ಣಪ್ಪನಿಗೆ ದಿನದಿಂದ ದಿನಕ್ಕೆ ಅಪ್ಪನೊಂದಿಗೆ ಮನಸ್ತಾಪ ಹೆಚ್ಚುತ್ತಿದ್ದುದು ಪುಡಿ ಖರ್ಚಿಗಾಗಿ ಅಪ್ಪನ ಮುಂದೆ ಕೈಯೊಡ್ಡಿದಾಗಲೆಲ್ಲಾ ಅಪ್ಪ ತೋರಿಸುತ್ತಿದ್ದ ನಿರ್ಲಕ್ಷ್ಯ, ಉಡಾಫೆಯಿಂದಾಗಿ. ಇತ್ತೀಚಿನ ಕೆಲ ತಿಂಗಳುಗಳಿಂದ ಆತ ಅಟ್ಟದ ಮೇಲಿದ್ದ ತೆಂಗಿನಕಾಯಿ ಅಕ್ಕಿಮುಡಿಗಳನ್ನು ಅಪ್ಪನ ಕಣ್ತಪ್ಪಿಸಿ ಮಾರತೊಡಗಿದ್ದು ಮಾಯಿಲನ ಗಮನಕ್ಕೂ ಬಂದಿದೆ. ಆದರೆ ಬೆಳೆದು ನಿಂತ ಮಗನನ್ನು ಎದುರು ಹಾಕಿಕೊಳ್ಳುವುದಕ್ಕೂ ಮಾಯಿಲನಿಗೆ ಧೈರ್ಯವಿಲ್ಲ. ಮಗ ತನ್ನ ಆಸ್ತಿ ಕರಗಿಸುವಲ್ಲಿ ತೀವ್ರ ಆಸಕ್ತನಾಗಿದ್ದಾನೆ ಎಂಬ ಭಾವನೆ ಮಾತ್ರ ಮಾಯಿಲನಲ್ಲಿ ದಿನದಿಂದ ದಿನಕ್ಕೆ ಬೆಳೆಯತೊಡಗಿದಂತೆ ಮಗನನ್ನು ಆದಷ್ಟು ದೂರವೇ ಇಡಲಾರಂಭಿಸಿದ್ದ. ದಿನ ಕಳೆದಂತೆ ತಂದೆ ಮಗನಲ್ಲಿ ಅಂತರ ಹೆಚ್ಚುತ್ತಲೇ ಇತ್ತು.

ಈ ಅಂತರದಿಂದಾಗಿಯೇ ಮುಂಬರುವ ಕೋಲದ ಸಿದ್ಧತೆಯಲ್ಲಿ ಮಾಯಿಲನೇ ಮುತುವರ್ಜಿ ವಹಿಸಬೇಕಾಗಿತ್ತು. ಒಂದೆಡೆ ಕೊಯ್ಲಿನ ತಲೆಬಿಸಿ; ಇನ್ನೊಂದೆಡೆ ಕೋಲದ ಸಿದ್ಧತೆ. ಮಾಯಿಲ ಆಗಲೇ ತನ್ನ ಮುಂಬೈಯ ಮಕ್ಕಳಿಗೆ, ತೋಡಬಳಿ ಶ್ಯಾನಭಾಗರ ಮಗ ಹರಿದಾಸನಲ್ಲಿ ಪತ್ರವೊಂದನ್ನು ಬರೆಸಿ 'ಕೋಲದ ಸಿದ್ಧತೆಗೆ ನಾಲ್ಕು ದಿನ ಮುಂದಾಗಿಯೇ ಬರಬೇಕು, ನಾನೊಬ್ಬನೇ ಎಷ್ಟುಂತ ಒದ್ದಾಡುವುದು' ಎಂದು ಕೃಷ್ಣಪ್ಪನ ಅಸಹಕಾರದ ಬಗ್ಗೆ ಪರೋಕ್ಷವಾಗಿ ಪತ್ರದಲ್ಲಿ ಹೇಳಿಯೂ ತೋರಿಸಿದ್ದ.

ಮೊನ್ನೆ ಕಂಡೇವು ಸಂಕ್ರಾಂತಿಯ ದಿನ ಮಾಯಿಲ ಭೂತದ ಸ್ಥಾನದೊಳಗಿಂದ ಹೊರಬರುತ್ತಿರಬೇಕಾದರೆ, ಅಲ್ಲೇ ನುಗ್ಗೇ ಮರದ ಬುಡದಲ್ಲಿ ಕುಳಿತು ಕಟ್ಟದ ಹುಂಜನ ಕಿರೀಟ ಸವರುತ್ತಿದ್ದ ಮಗನೊಂದಿಗೆ ಕೋಲದ ಪ್ರಸ್ತಾಪವನ್ನೆತ್ತಿದ. ಅಪ್ಪನ ಸ್ವರ ಕರ್ಣಪಟಲಕ್ಕೆ ಬಾರಿಸಲ್ಪಟ್ಟೊಡನೆ ಕೃಷ್ಣಪ್ಪ ಕೋಳಿ ಸಮೇತ ಓಣಿಗಿಳಿದು ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದ. ಅದೆಲ್ಲ ತನ್ನ ಕರ್ತವ್ಯವಲ್ಲ, ಭೂತ ಅಪ್ಪನದು, ಮುಂಬೈ ಅಣ್ಣಂದಿರದ್ದು ಎನ್ನುವ ಭಾವನೆ ಕೃಷ್ಣಪ್ಪನಲ್ಲಿ.

ಮಾಯಿಲನಿಗೆ ಉಸಿರು ಕಟ್ಟುವಂತಹ ಸ್ಥಿತಿ. ಆತನಿಗೆ ಬಸ್ಸು ಪ್ರಯಾಣ ಒಗ್ಗದ ವಿಷಯ. ಹಳೆಯ ಕಾಲದ ಮನುಷ್ಯನಾತ. ಏನಿದ್ದರೂ ಆತನ ಓಡಾಟ ದಿನಕ್ಕೆ ನಾಲಕ್ಕು ಬಾರಿ ಗದ್ದೆಯ ಹುಣಿಯ ಮೇಲೆ. ಕೋಲ ಕಟ್ಟುವ ನಲ್ಕೆಯ ದುಗ್ಗನನ್ನು ಒಂದು ತಿಂಗಳ ಮೊದಲೇ ಹೇಳಿಡದಿದ್ದರೆ ಆತ ಮತ್ತೆ ಕೈಗೆ ಸಿಗುವವನಲ್ಲ. ಸುಗ್ಗಿಯ ನಂತರ ಆಟಿಯ ವರೆಗೂ ಕೋಲಗಳದ್ದೇ ಸೀಸನ್. ಮಳೆಗಾಲವಾದರೇನಂತೆ ದುಗ್ಗನಿಗೂ ಕೋಲಗಳಿಗೆ ಬರವಿಲ್ಲ.

ದುಗ್ಗ ತನ್ನ ಪರಿವಾರದೊಂದಿಗೆ ಸುಗ್ಗಿಯಲ್ಲೇ ಸಂಚಾರ ಹೊರಡುತ್ತಾನೆ. ಮಾಯಿಲನಿಗೆ, ಮಗ ಕೃಷ್ಣಪ್ಪನಲ್ಲಿ ಮತ್ತೊಮ್ಮೆ ಸಹಾಯ ಕೇಳುವುದು ಅನಿವಾರ್ಯವೆಂದೆನಿಸಿತ್ತು. ಒಮ್ಮೆ ಮುಖಭಂಗವಾದರೇನಂತೆ; ತನ್ನ ಮಗನಲ್ಲವೇ ಮತ್ತೊಮ್ಮೆ ಕೇಳುವುದು ಎಂದು ನಿನ್ನೆ ತೀರ್ಮಾನಿಸಿದ್ದ ಮಾಯಿಲ.

ಇದೀಗ ಮಾಯಿಲ ಬೈಲಾಕಿ ದಾಟಿ ಹುಣಿಸೇ ಮರದ ಬಳಿ ಬರಬೇಕಾದರೆ, ಕೃಷ್ಣಪ್ಪ ಇನ್ನೂ ಅಲ್ಲೇ ನಿಂತು ಬೀಡಿ ಸೇದುತ್ತಲೇ ಇದ್ದ. ಅಪ್ಪನನ್ನು ಕಂಡವನೇ ಬೆನ್ನು ತಿರುಗಿಸಿ ನಿಂತುಬಿಟ್ಟ. ಮಾಯಿಲ ಮಗನ ಬಳಿ ಬಂದವನೇ ಮತ್ತೊಮ್ಮೆ ಕೋಲ ಹಾಗೂ ದುಗ್ಗನ ಬಗ್ಗೆ ಪ್ರಸ್ತಾಪಿಸಿ, ಪತ್ತನಜೆ ಹತ್ತಿರವಾದುದರ ಬಗ್ಗೆ ದೀನವಾಗಿ ಹೇಳುತ್ತಾ ಮಗನಲ್ಲಿ ಭಯ, ಅನುಕಂಪ ಹುಟ್ಟಿಸಲು ಪ್ರಯತ್ನಿಸಿದ. ಕೃಷ್ಣಪ್ಪ ನಿರ್ಲಿಪ್ತನಾಗಿ 'ಪತ್ತನಜೆ ಬರಲಿ, ಇಪ್ಪತ್ತಜೆ ಬರಲಿ ನನಗೇನು? ಸರಿಯಾಗಿ ಹಣ ಕೊಟ್ಟರೆ ದುಗ್ಗನಲ್ಲಿ ಹೋಗಿ ಬರುತ್ತೇನೆ' ಎಂದು ಉಡಾಫೆಯಲ್ಲೇ ಉತ್ತರಿಸಿದ್ದ.